# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

## ಆಯುಕ್ತರು ರವರ ಕಛೇರಿ, ನರಸಿಂಹರಾಜ ವೃತ್ತ, ಬೆಂಗಳೂರು – 560 002.

ಸಂಖ್ಯೆ: ಹೆನಿನಯೋ/ಪಿಆರ್/1532/2016-17 ದಿನಾಂಕ: 30-03-2017.

## ಸುತ್ತೋಲೆ

ವಿಷಯ:- ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪೀಠವು ಅರ್ಜಿ ಸಂಖ್ಯೆ. 222/2014, ದಿನಾಂಕ: 04-05-2016 ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:-
1. ಸರ್ಕಾರದ ಪತ್ರ ಸಂಖ್ಯೆ. ನಅಇ 130 ಬಿಎಮ್ಆರ್ 2016, ಬೆಂಗಳೂರು, ದಿನಾಂಕ: 26-10-2016.
2. ಸರ್ಕಾರದ ಪತ್ರ ಸಂಖ್ಯೆ. ನಅಇ 845 ಎಂಎನ್‌ವೈ 2016, ಬೆಂಗಳೂರು, ದಿನಾಂಕ: 16-02-2017.

*********

ಉಲ್ಲೇಖ (1) ರ ಸರ್ಕಾರದ ಪತ್ರದಲ್ಲಿ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪ್ರಧಾನ ಪೀಠದ ಆದೇಶವನ್ನು ಜಾರಿಗೊಳಿಸುವ ವಿಚಾರದಲ್ಲಿ ಮಾನ್ಯ ಹಸಿರು ನ್ಯಾಯ ಮಂಡಳಿಯ ತೀರ್ಪು ಸಾರ್ವತ್ರಿಕವಾಗಿ ಅನ್ವಯವಾಗುತ್ತದೆಂದು ಮತ್ತು ಈ ನ್ಯಾಯ ಮಂಡಳಿಯ ನಿರ್ದೇಶನಗಳು ತೀರ್ಪಿನ ನಂತರ ಜಾರಿಗೆ ಬಂದಂತಾಗುತ್ತದೆಂದು ಕಾನೂನು ಇಲಾಖೆಯು ಅಭಿಪ್ರಾಯಿಸಿದ್ದು ಇದರಂತೆ ಇಂತಹ ಪ್ರಕರಣಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳಲು ನಿರ್ದೇಶಿಸಲಾಗಿರುತ್ತದೆ.

ಉಲ್ಲೇಖ (2) ರ ಸರ್ಕಾರದ ಪತ್ರದಲ್ಲಿ ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣ ಪ್ರಧಾನ ಪೀಠದ ತೀರ್ಪನ್ನು ಅನುಷ್ಠಾನಗೊಳಿಸುವ ವಿಚಾರದಲ್ಲಿ ಸ್ಪಷ್ಟೀಕರಣ ನೀಡಿ "ಸಕ್ಷಮ ಪ್ರಾಧಿಕಾರವೊಂದರಿಂದ ಈಗಾಗಲೇ ಬಡಾವಣೆ ವಿನ್ಯಾಸ ಅನುಮೋದನೆಗೊಂಡು ಅಭಿವೃದ್ಧಿಪಡಿಸಿರುವ ನಿವೇಶನಗಳಲ್ಲಿ ಈಗಾಗಲೇ ಭಾಗಶಃ ಬೆಳವಣಿಗೆಗಳು ಬಂದಿದ್ದು, ಉಳಿಕೆ ಖಾಲಿ ಇರುವ ಇಂತಹ ವಿನ್ಯಾಸ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿನ ಕಟ್ಟಡಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದಿಂದ ವಿಧಿಸಲಾಗಿರುವ ಷರತ್ತುಗಳು ಅನ್ವಯವಾಗುವುದಿಲ್ಲ". ಎಂದು ಪುನರುಚ್ಚರಿಸಿ ನಿರ್ದೇಶಿಸಲಾಗಿರುತ್ತದೆ.

ಆದುದರಿಂದ, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯಿಂದ ಕಟ್ಟಡ ನಿರ್ಮಾಣಕ್ಕೆ ನಕ್ಷೆ ಮಂಜೂರಾತಿ / ಪ್ರಾರಂಭಿಕ ಪ್ರಮಾಣಪತ್ರ / ಸ್ವಾಧೀನಾನುಭವ ಪ್ರಮಾಣಪತ್ರ ನೀಡುವಾಗ ಉಲ್ಲೇಖ (1) ಮತ್ತು (2) ರ ಸರ್ಕಾರದ ಪತ್ರಗಳಲ್ಲಿ ನೀಡಿರುವ ನಿರ್ದೇಶನ / ಸ್ಪಷ್ಟೀಕರಣದನುಸಾರ ಕ್ರಮವಹಿಸುವಂತೆ ಈ ಮೂಲಕ ಸೂಚಿಸಲಾಗಿದೆ.

ಆಯುಕ್ತರು
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ.

**ಲಗತ್ತು:**- ಉಲ್ಲೇಖ (1) ಮತ್ತು (2) ರ ಸರ್ಕಾರದ ಪತ್ರಗಳು.

**ಯಥಾ ಪ್ರತಿಯನ್ನು ಮಾಹಿತಿಗಾಗಿ ಹಾಗೂ ಸೂಕ್ತ ಕ್ರಮಕ್ಕಾಗಿ ಕಳುಹಿಸಿದೆ.**

1) ವಿಶೇಷ ಆಯುಕ್ತರು (ಯೋಜನೆಗಳು) ರವರಿಗೆ 01/04/2017
2) ಅಪರ / ಜಂಟಿ ಆಯುಕ್ತರು (ಪೂರ್ವ ವಲಯ / ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ಬೊಮ್ಮನಹಳ್ಳಿ ವಲಯ / ರಾಜರಾಜೇಶ್ವರಿ ನಗರ ವಲಯ / ಕಂದಾಯ) ರವರುಗಳಿಗೆ
3) ಪ್ರಧಾನ ಅಭಿಯಂತರರು ರವರಿಗೆ
4) ಅಪರ ನಿರ್ದೇಶಕರು (ನಗರ ಯೋಜನೆ) ರವರಿಗೆ
5) ಮುಖ್ಯ ಅಭಿಯಂತರರು (ಕೆರೆಗಳು) ರವರಿಗೆ 1/4/17
6) ಮುಖ್ಯ ಅಭಿಯಂತರರು (ಮಳೆ ನೀರುಗಾಲುವೆ) ರವರಿಗೆ
7) ಜಂಟಿ ನಿರ್ದೇಶಕರು (ನಗರ ಯೋಜನೆ – ಉತ್ತರ, ದಕ್ಷಿಣ ಮತ್ತು ಸ್ಕ್ವಾಡ್) ರವರಿಗೆ

O/C. 01/4/17

8) ಮುಖ್ಯ ಅಭಿಯಂತರರು (ಪೂರ್ವ ವಲಯ / ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ಬೊಮ್ಮನಹಳ್ಳಿ ವಲಯ / ರಾಜರಾಜೇಶ್ವರಿ ನಗರ ವಲಯ ರವರುಗಳಿಗೆ

9) ಸಹಾಯಕ ನಿರ್ದೇಶಕರು (ನಗರ ಯೋಜನೆ – ಪೂರ್ವ ವಲಯ / ಪಶ್ಚಿಮ ವಲಯ / ದಕ್ಷಿಣ ವಲಯ / ಮಹದೇವಪುರ ವಲಯ / ಯಲಹಂಕ ವಲಯ / ದಾಸರಹಳ್ಳಿ ವಲಯ / ಬೊಮ್ಮನಹಳ್ಳಿ ವಲಯ / ರಾಜರಾಜೇಶ್ವರಿ ನಗರ ವಲಯ) ರವರುಗಳಿಗೆ

10) ಎಲ್ಲಾ ಉಪ ವಿಭಾಗಗಳ ಸಹಾಯಕ ಕಾರ್ಯಪಾಲಕ ಅಭಿಯಂತರರು ರವರುಗಳಿಗೆ

11) ಸಲಹೆಗಾರರು, ಮಾಹಿತಿ ತಂತ್ರಜ್ಞಾನ ರವರಿಗೆ ವೆಬ್‌ಸೈಟ್‌ನಲ್ಲಿ ಪ್ರಚುರ ಪಡಿಸಲು ಕಳುಹಿಸಿದೆ.

ಪಾಲಿಕೆ
ಆಯುಕ್ತರವರ ಕಛೇರಿ
1 APR 2017
ಸಂಖ್ಯೆ.......................

ಕರ್ನಾಟಕ ಸರ್ಕಾರ

ಸಂಖ್ಯೆ: ನಅಇ 845 ಎಂಎನ್‌ವೈ 2016

ಕರ್ನಾಟಕ ಸರ್ಕಾರ ಸಚಿವಾಲಯ,
ವಿಕಾಸಸೌಧ,
ಬೆಂಗಳೂರು, ದಿನಾಂಕ: 16-02-2017

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ,
ಬೆಂಗಳೂರು.

ಇವರಿಗೆ:

ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

ಬಿ.ಬಿ.ಎಂ.ಪಿ. ಆಯುಕ್ತರ ಆಪ್ತ ಕಾರ್ಯಾಲಯ
ಸಂಖ್ಯೆ ಪಿ.ಎಸ್.ಆರ್. (1) 12687
ದಿನಾಂಕ 18/02/17

ಮಾನ್ಯರೆ,

ವಿಷಯ: ಮಾನ್ಯ ಹಸಿರು ನ್ಯಾಯಾಧೀಕರಣ ಪ್ರಧಾನ ಪೀಠವು ಅರ್ಜಿ ಸಂಖ್ಯೆ: 222/2014, ದಿನಾಂಕ: 04-05-2016ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ:
1. CREDAI ಬೆಂಗಳೂರು ರವರ ಮನವಿ ಪತ್ರ ದಿನಾಂಕ: 19-11-2016.
2. ಆಯುಕ್ತರು, ಬಿಬಿಎಂಪಿರವರ ಪತ್ರ ಸಂಖ್ಯೆ: ಹೆನಿನಯೋ/ಪಿಆರ್/1133/2016-17, ದಿನಾಂಕ: 22-11-2016.
3. ಕಾನೂನು ಇಲಾಖೆಯ ಅಭಿಪ್ರಾಯ ಸಂಖ್ಯೆ:ಲಾ/312/ಅಭಿಪ್ರಾಯ/2016, ದಿನಾಂಕ: 05-08-2016.
4. ಕಾನೂನು ಇಲಾಖೆಯ ಅಭಿಪ್ರಾಯ ಸಂಖ್ಯೆ:ಲಾ/414/ಅಭಿಪ್ರಾಯ/2016, ದಿನಾಂಕ: 08-02-2017.

* * * * *

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1) ಮತ್ತು (2)ರ ಪತ್ರಗಳನ್ನು ಪರಿಶೀಲಿಸಲಾಯಿತು. ಮಾನ್ಯ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು ಅರ್ಜಿ ಸಂಖ್ಯೆ:222/2014ರಲ್ಲಿ ದಿನಾಂಕ: 04-05-2016ರಂದು ನೀಡಿರುವ ತೀರ್ಪಿನ ಹಿನ್ನೆಲೆಯಲ್ಲಿ ಉಲ್ಲೇಖಿತ ಪತ್ರಗಳಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಸ್ಪಷ್ಟೀಕರಣ ಕೋರಿರುತ್ತಾರೆ:

1) For building plans sanctioned with 30 mtrs lake buffer or nala buffer as per ZR before NGT order dated: 04-05-2016, CC, OC, can be issued and modified building plans if required may be sanctioned with the same lake or nala buffer.

2) For development plans sanctioned with 30 mtrs lake buffer or nala buffer as per ZR before NGT order dated: 04-05-2016, modified development plans and building plans may be sanctioned with the same lake and nala buffer.

ಮು.ತಿ.ನೋ..

ಬಿ.ಬಿ.ಎಂ.ಪಿ. ಹೆನಿ (ನ.ಯೋ) ರವರ ಕಛೇರಿ
PR/1532/16-17
ದಿನಾಂಕ 03/03/17

3/3 All JD, JCs

3) ಈಗಾಗಲೇ ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ವಿನ್ಯಾಸ ಅನುಮೋದನೆ ಗೊಂಡು ಅಭಿವೃದ್ಧಿಪಡಿಸಿರುವ ನಿವೇಶನಗಳಲ್ಲಿ ಭಾಗಶಃ ಬೆಳವಣಿಗೆಗಳು ಬಂದಿದ್ದು, ಉಳಿಕೆ ಖಾಲಿ ಇರುವ ನಿವೇಶನಗಳಲ್ಲಿ ಕಟ್ಟಡ ನಿರ್ಮಾಣಗೊಳ್ಳದೇ ಇರುವಂತಹ ಪ್ರಕರಣಗಳಲ್ಲಿ, ಸದರಿ ನಿವೇಶನಗಳು ಕೆರೆಯ ಅಂಚಿನಿಂದ 75.00 ಮೀಟರ್ ಪ್ರೈಮರಿ ನಾಲಾ ಅಂಚಿನಿಂದ 50.00 ಮೀಟರ್ ಸೆಕೆಂಡರಿ ನಾಲಾ ಅಂಚಿನಿಂದ35.00 ಮೀಟರ್ ಮತ್ತು ಟೆರಿಷರಿ ನಾಲಾ ಅಂಚಿನಿಂದ 25.00 ಮೀಟರ್ ಒಳಗೆ ಬರುತ್ತಿದ್ದು, ಪ್ರಸ್ತುತ ಕಟ್ಟಡ ನಕ್ಷೆ ಮಂಜೂರಾತಿ ಕೋರಿ ಪಾಲಿಕೆಗೆ ಪ್ರಸ್ತಾವನೆ ಸಲ್ಲಿಸುವಂತಹ ಪ್ರಕರಣಗಳು;

4) ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರದಿಂದ ಅಭಿವೃದ್ಧಿ ಯೋಜನೆ ನಕ್ಷೆ ಅನುಮೋದನೆ ಪಡೆದುಕೊಂಡು ಎನ್.ಜಿ.ಟಿ ಆದೇಶದ ಪೂರ್ವದಲ್ಲೇ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಗಳಿಂದ ನಿರಾಕ್ಷೇಪಣಾ ಪತ್ರಗಳನ್ನು ಪಡೆದುಕೊಂಡು ಪ್ರಸ್ತುತ ಕಟ್ಟಡ ನಕ್ಷೆ ಮಂಜೂರಾತಿಗಾಗಿ ಪಾಲಿಕೆಗೆ ಪ್ರಸ್ತಾವನೆ ಸಲ್ಲಿಸುವ ಪ್ರಕರಣಗಳು.

ಈ ಬಗ್ಗೆ ಪರಿಶೀಲಿಸಿದ ಕಾನೂನು ಇಲಾಖೆಯು ಉಲ್ಲೇಖಿತ (3) ಮತ್ತು (4)ರಲ್ಲಿ ಈ ಕೆಳಗಿನಂತೆ ಅಭಿಪ್ರಾಯವನ್ನು ನೀಡಿರುತ್ತಾರೆ.

ಯಾವುದೇ ಹೊಸ ಕಾಯ್ದೆ, ತಿದ್ದುಪಡಿ ಕಾಯ್ದೆ, ತೀರ್ಪು, ನಿಯಮಗಳು ಪೂರ್ವಾನ್ವಯವಾಗಿ ಅನ್ವಯವಾಗುವುದೆಂದು ಸ್ಪಷ್ಟಪಡಿಸದಿದ್ದಲ್ಲಿ, ಅಂತಹ ಎಲ್ಲಾ ಕಾಯ್ದೆ, ತೀರ್ಪು ನಿಯಮಗಳು ಭವಿಷ್ಯಾವರ್ತಿಯಾಗಿ ಅನ್ವಯವಾಗತಕ್ಕದ್ದು. ಮಾನ್ಯ ಎನ್.ಜಿ.ಟಿ.ಯ ತೀರ್ಪಿನಲ್ಲಿ ನೀಡಲಾದ ನಿರ್ದೇಶನಗಳು ಪೂರ್ವಾನ್ವಯವಾಗಿ ಅನ್ವಯವಾಗುತ್ತಿದೆ ಎಂದು ಹೇಳಿರುವುದಿಲ್ಲ. ಆದುದರಿಂದ ಈ ಪ್ರಕರಣದಲ್ಲಿ ನೀಡಲಾದ ನಿರ್ದೇಶನಗಳು ಭವಿಷ್ಯಾವರ್ತಿಯಾಗಿ ಅನ್ವಯವಾಗುತ್ತದೆ ಎಂದು ಪರಿಗಣಿಸಬೇಕಾಗುತ್ತದೆ.

ಮಾನ್ಯ ಎನ್.ಜಿ.ಟಿ. ಯ ತೀರ್ಪಿನ ಪೂರ್ವದಲ್ಲಿ ನಿಯಮಾನುಸಾರ ಕಟ್ಟಡ ನಕ್ಷೆ ಮಂಜೂರಾತಿ ಪಡೆದು ಭಾಗಶಃ ನಿರ್ಮಾಣವಾಗಿರುವ ಮತ್ತು ಭಾಗಶಃ ಖಾಲಿ ಇರುವ ಕಟ್ಟಡಗಳು ಮತ್ತು ನಿಯಮಾನುಸಾರ ನಕ್ಷೆ ಮಂಜೂರಾತಿ ಪಡೆದು ಕಟ್ಟಡ ನಿರ್ಮಾಣ ಕಾಮಗಾರಿ ಪ್ರಾರಂಭಿಸದೇ ಇರುವ ಪ್ರಕರಣಗಳಿಗೆ ಈ ತೀರ್ಪಿನ ನಿರ್ದೇಶನಗಳನ್ನು ಪೂರ್ವಾನ್ವಯಗೊಳಿಸಲು ಅವಕಾಶವಿರುವುದಿಲ್ಲ. ಇಂತಹ ಪ್ರಕರಣಗಳಲ್ಲಿ ಮಂಜೂರಾತಿಗಳನ್ನು ನೀಡುವ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ನಿಯಮಗಳನ್ವಯವೇ ನೀಡಿದ್ದಲ್ಲಿ, ಅಂತಹ ಮಂಜೂರಾತಿಗಳು ಎನ್.ಜಿ.ಟಿ.ಯ ಆದೇಶದಿಂದ ಪೂರ್ವಾನ್ವಯವಾಗಿ ಕಾನೂನುಬಾಹಿರವಾಗುವುದಿಲ್ಲ. ರಾಷ್ಟ್ರೀಯ ಹಸಿರು ನ್ಯಾಯ ಮಂಡಳಿಯು ಒಂದು Quasi Judicial Body ಆಗಿರುತ್ತದೆ. ಇಂತಹ ನ್ಯಾಯಾಧೀಕರಣ ಗಳಿಗೆ ಕಾನೂನನ್ನು ರೂಪಿಸುವಂತಹ ಪ್ರಾಧಿಕಾರವಿರುವುದಿಲ್ಲ. ಮಾನ್ಯ ರಾಜ್ಯ ಸರ್ಕಾರವು ತನ್ನ Legislative competence ಮೂಲಕ ರೂಪಿಸಿರುವ ಕಾಯ್ದೆ ನಿಯಮಗಳನ್ವಯ ಈಗಾಗಲೇ ನಕ್ಷೆ ಮಂಜೂರಾತಿ ಮತ್ತು ಪರವಾನಗಿ ಮುಂತಾದವುಗಳನ್ನು ಪಡೆದುಕೊಂಡು ಪ್ರಾರಂಭಿಕ ಹಂತದಲ್ಲಿರುವ ಭಾಗಶಃ ಪೂರ್ಣಗೊಂಡಿರುವ ಭಾಗಶಃ ಅಪೂರ್ಣವಾಗಿರುವ ಮತ್ತು ಇನ್ನೂ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಾರಂಭಿಸದೇ ಇರುವ ಪ್ರಕರಣಗಳಿಗೂ ಈ ಆದೇಶ ಅನ್ವಯವಾಗುವುದೆಂದು ಎನ್.ಜಿ.ಟಿ.ಯ ತೀರ್ಪಿನಲ್ಲಿ ಹೇಳಿರುವುದಿಲ್ಲ ಮತ್ತು ರಾಜ್ಯ ಸರ್ಕಾರ ಇಂತಹ ಕಟ್ಟಡಗಳಿಗೆ ನೀಡಿರುವ ಮಂಜೂರಾತಿ ಅಥವಾ ಪರವಾನಗಿಗಳು ಕಾನೂನುಬಾಹಿರವೆಂದೂ ಸಹ ತೀರ್ಪಿನಲ್ಲಿ ಹೇಳಿರುವುದಿಲ್ಲ. ಆದುದರಿಂದ, ಈಗಾಗಲೇ ನಿಯಮಾನುಸಾರ ಮಂಜೂರಾತಿ ಪಡೆದಿರುವಂತಹ ಪ್ರಕರಣಗಳಲ್ಲಿ ಮಾನ್ಯ ಎನ್.ಜಿ.ಟಿ.ಯ ಆದೇಶದನ್ವಯ ಕಟ್ಟಡ ನಿರ್ಮಾಣ ಮಾಡದಂತೆ ತಡೆಯುವುದು ಕಾನೂನುಬಾಹಿರವಾಗುತ್ತದೆ".

ಮು.ತಿ.ನೋ..

ಮುಂದುವರೆದು, ಸಕ್ಷಮ ಪ್ರಾಧಿಕಾರವೊಂದರಿಂದ ಈಗಾಗಲೇ ಬಡಾವಣೆ ವಿನ್ಯಾಸ ಅನುಮೋದನೆಗೊಂಡು ಅಭಿವೃದ್ಧಿಪಡಿಸಿರುವ ನಿವೇಶನಗಳಲ್ಲಿ ಈಗಾಗಲೇ ಭಾಗಶಃ ಬೆಳವಣಿಗೆಳು ಬಂದಿದ್ದು, ಉಳಿಕೆ ಖಾಲಿ ಇರುವ ಇಂತಹ ವಿನ್ಯಾಸ ಅನುಮೋದನೆಗೊಂಡಿರುವ ಬಡಾವಣೆಗಳಲ್ಲಿನ ಕಟ್ಟಡಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣದಿಂದ ವಿಧಿಸಲಾಗಿರುವ ಷರತ್ತುಗಳು ಅನ್ವಯವಾಗುವುದಿಲ್ಲ. ಎನ್.ಜಿ.ಟಿ. ಆದೇಶದ ಪೂರ್ವದಲ್ಲೇ ಸಂಬಂಧಿಸಿದ ಸಕ್ಷಮ ಪ್ರಾಧಿಕಾರಿಗಳಿಂದ ನಿಯಮಾನುಸಾರ ನಿರಾಕ್ಷೇಪಣಾ/ಅನುಮತಿ ಪತ್ರಗಳನ್ನು ಪಡೆದುಕೊಂಡು ಪ್ರಸ್ತುತ ಕೇವಲ ಕಟ್ಟಡ ನಕ್ಷೆ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸುತ್ತಿರುವ ಪ್ರಕರಣಗಳಿಗೆ ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು ಸದರಿ ಪ್ರಕರಣದಲ್ಲಿ ನೀಡಿರುವ ನಿರ್ದೇಶನಗಳು ಅನ್ವಯವಾಗುವುದಿಲ್ಲವೆಂದು ಪುನರುಚ್ಚರಿಲಾಗಿದೆ ಎಂದು ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

ಕೆ. ಎ. ಹಿದಾಯತ್ತುಲ್ಲ

(ಕೆ.ಎ.ಹಿದಾಯತ್ತುಲ್ಲ)

ಸರ್ಕಾರದ ಉಪ ಕಾರ್ಯದರ್ಶಿ-3

ನಗರಾಭಿವೃದ್ಧಿ ಇಲಾಖೆ

16/02

## ಕರ್ನಾಟಕ ಸರ್ಕಾರ

ಸಂಖ್ಯೆ:ನಅಇ 130 ಬಿಎಂಆರ್ 2016

ಕರ್ನಾಟಕ ಸರ್ಕಾರದ ಸಚಿವಾಲಯ,
ವಿಕಾಸ ಸೌಧ,
ಬೆಂಗಳೂರು, ದಿನಾಂಕ:26-10-2016.

ಇವರಿಂದ:

ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು,
ನಗರಾಭಿವೃದ್ಧಿ ಇಲಾಖೆ,
ವಿಕಾಸ ಸೌಧ,
ಬೆಂಗಳೂರು.

ಇವರಿಗೆ:

1) ಆಯುಕ್ತರು,
ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

2) ಆಯುಕ್ತರು,
ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ,
ಬೆಂಗಳೂರು.

3) ಮಹಾನಗರ ಆಯುಕ್ತರು,
ಬೆಂಗಳೂರು ಮಹಾನಗರ ಪ್ರದೇಶಾಭಿವೃದ್ಧಿ ಪ್ರಾಧಿಕಾರ,
ಬೆಂಗಳೂರು.

ಮಾನ್ಯರೇ,

ವಿಷಯ: ರಾಷ್ಟ್ರೀಯ ಹಸಿರು ನ್ಯಾಯಾಧೀಕರಣವು ದಿನಾಂಕ:04-05-2016 ರಂದು ನೀಡಿರುವ ತೀರ್ಪನ್ನು ಅನುಷ್ಠಾನಗೊಳಿಸುವ ಕುರಿತು.

ಉಲ್ಲೇಖ: ಇದೇ ಸರ್ಕಾರಿ ಪತ್ರ ಸಂಖ್ಯೆ:ನಅಇ 227 ಬೆಂಅಸೇ 2016, ದಿನಾಂಕ: 27-07-2016.

********

ಮೇಲ್ಕಂಡ ವಿಷಯಕ್ಕೆ ಸಂಬಂಧಿಸಿದಂತೆ, ರಾಷ್ಟ್ರೀಯ ಹಸಿರು ನ್ಯಾಯಧೀಕರಣದ ಪ್ರಧಾನ ಪೀಠವು ಅರ್ಜಿ ಸಂಖ್ಯೆ:222/2014 ರಲ್ಲಿ ದಿನಾಂಕ:04-05-2016 ರಂದು ನೀಡಿರುವ ಆದೇಶದಲ್ಲಿ ಕೆರೆಗಳ ಸುತ್ತುಮುತ್ತಲಿನ ಹಾಗೂ ರಾಜಕಾಲುವೆಗಳ ಅಂಚಿನಿಂದ Buffer Zone ಅನ್ನು ಈ ಕೆಳಕಂಡಂತೆ ನಿಗದಿಪಡಿಸಿರುತ್ತದೆ.

1) In the case of lakes, 75 metres from periphery of water body to be maintained as green belt and Buffer Zone for all the existing water bodies i.e. lakes/wet lands.
2) 50 metres from the edge of primary Rajakaluves.
3) 35 metres from the edges in the case of secondary Rajakaluves.
4) 25 metres from the edges in the case of tertiary Rajakaluves.

ಮಾನ್ಯ ಎನ್.ಜಿ.ಟಿ.ಯ ಮೇಲ್ಕಂಡ ಈ ನಿರ್ದೇಶನಗಳ ಹಿನ್ನೆಲೆಯಲ್ಲಿ ಹಾಗೂ ಉಲ್ಲೇಖಿತ ಅರೆ ಸರ್ಕಾರಿ ಪತ್ರದಲ್ಲಿ ನೀಡಲಾದ ನಿರ್ದೇಶನಗಳ ಹಿನ್ನೆಲೆಯಲ್ಲಿ ಈ ಕೆಳಕಂಡ ಅಂಶಗಳ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿತ್ತು.

1) ಈ ಆದೇಶ ಪೂರ್ವಾನ್ವಯವಾಗಿ ಅಥವಾ ಭವಿಷ್ಯವರ್ತಿಯಾಗಿ ಅನ್ವಯವಾಗುತ್ತದೆಯೇ?
2) ಕಟ್ಟಡ ನಕ್ಷೆ ಮಂಜೂರಾತಿ ಪಡೆದು. ಭಾಗಶ: ಕಟ್ಟಡ ನಿರ್ಮಿಸಿದ್ದು. ಭಾಗಶ: ಖಾಲಿ ಇರುವ ಪ್ರದೇಶದಲ್ಲಿ ಕಟ್ಟಡ ನಿರ್ಮಿಸಲು ಅವಕಾಶ ಕಲ್ಪಿಸಬಹುದೇ?
3) ಕಟ್ಟಡ ನಕ್ಷೆ ಮಂಜೂರಾತಿ ಪಡೆದು ಇನ್ನೂ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಾರಂಭಿಸದೇ ಇರುವ ಪ್ರಕರಣಗಳಿಗೆ ಈ ಆದೇಶ ಅನ್ವಯವಾಗುತ್ತದೆಯೇ?

ಈ ಬಗ್ಗೆ ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯ ನೀಡಿರುತ್ತದೆ.

೧) ಯಾವುದೇ ಹೊಸ ಕಾಯ್ದೆ, ತಿದ್ದುಪಡಿ ಕಾಯ್ದೆ, ತೀರ್ಪು, ನಿಯಮಗಳು ಪೂರ್ವಾನ್ವಯವಾಗಿ ಅನ್ವಯವಾಗುವುದೆಂದು ಸ್ಪಷ್ಟಪಡಿಸದಿದ್ದಲ್ಲಿ, ಅಂತಹ ಎಲ್ಲಾ ಕಾಯ್ದೆ, ತೀರ್ಪು ನಿಯಮಗಳು ಭವಿಷ್ಯಾವರ್ತಿಯಾಗಿ ಅನ್ವಯವಾಗತಕ್ಕದ್ದು. ಮಾನ್ಯ ಎನ್.ಜಿ.ಟಿ.ಯ ತೀರ್ಪಿನಲ್ಲಿ ನೀಡಲಾದ ನಿರ್ದೇಶನಗಳು ಪೂರ್ವಾನ್ವಯವಾಗಿ ಅನ್ವಯವಾಗುತ್ತದೆ ಎಂದು ಹೇಳಿರುವುದಿಲ್ಲ. ಆದುದರಿಂದ. ಈ ಪ್ರಕರಣದಲ್ಲಿ ನೀಡಲಾದ ನಿರ್ದೇಶನಗಳು ಭವಿಷ್ಯಾವರ್ತಿಯಾಗಿ ಅನ್ವಯವಾಗುತ್ತವೆ ಎಂದು ಪರಿಗಣಿಸಬೇಕಾಗುತ್ತದೆ.

೨) ಮಾನ್ಯ ಎನ್.ಜಿ.ಟಿ.ಯ ತೀರ್ಪಿನ ಪೂರ್ವದಲ್ಲಿ ನಿಯಮಾನುಸಾರ ಕಟ್ಟಡ ನಕ್ಷೆ ಮಂಜೂರಾತಿ ಪಡೆದು ಭಾಗಶ: ನಿರ್ಮಾಣವಾಗಿರುವ ಮತ್ತು ಭಾಗಶ: ಖಾಲಿ ಇರುವ ಕಟ್ಟಡಗಳು ಮತ್ತು ನಿಯಮಾನುಸಾರ ನಕ್ಷೆ ಮಂಜೂರಾತಿ ಪಡೆದು ಕಟ್ಟಡ ನಿರ್ಮಾಣ ಕಾಮಗಾರಿ ಪ್ರಾರಂಭಿಸದೇ ಇರುವ ಪ್ರಕರಣಗಳಲ್ಲಿ ಮಂಜೂರಾತಿಗಳನ್ನು ನೀಡುವ ಸಂದರ್ಭದಲ್ಲಿ ಚಾಲ್ತಿಯಲ್ಲಿದ್ದ ನಿಯಮಗಳನ್ವಯವೇ ನೀಡಿದ್ದಲ್ಲಿ, ಅಂತಹ ಮಂಜೂರಾತಿಗಳು ಎನ್.ಜಿ.ಟಿ.ಯ ಆದೇಶದಿಂದ ಪೂರ್ವಾನ್ವಯವಾಗಿ ಕಾನೂನುಬಾಹಿರವಾಗುವುದಿಲ್ಲ. ರಾಷ್ಟ್ರೀಯ ಹಸಿರು ನ್ಯಾಯಮಂಡಳಿಯು ಒಂದು Quasi Judicial Body ಆಗಿರುತ್ತದೆ. ಇಂತಹ ನ್ಯಾಯಾಧೀಕರಣಗಳಿಗೆ ಕಾನೂನನ್ನು ರೂಪಿಸುವಂತಹ ಪ್ರಾಧಿಕಾರವಿರುವುದಿಲ್ಲ. ರಾಜ್ಯ ಸರ್ಕಾರವು ತನ್ನ legislative competence ಮೂಲಕ ರೂಪಿಸಿರುವ ಕಾಯ್ದೆ ನಿಯಮಗಳನ್ವಯ, ಈಗಾಗಲೇ ನಕ್ಷೆ ಮಂಜೂರಾತಿ ಮತ್ತು ಪರವಾನಗಿ ಮುಂತಾದವುಗಳನ್ನು ಪಡೆದುಕೊಂಡು ಪ್ರಾರಂಭಿಕ ಹಂತದಲ್ಲಿರುವ, ಭಾಗಶ: ಪೂರ್ಣಗೊಂಡಿರುವ ಭಾಗಶ: ಅಪೂರ್ಣವಾಗಿರುವ ಮತ್ತು ಇನ್ನೂ ಕಟ್ಟಡ ನಿರ್ಮಾಣ ಕಾಮಗಾರಿ ಪ್ರಾರಂಭಿಸದೇ ಇರುವ ಪ್ರಕರಣಗಳಿಗೂ. ಈ ಆದೇಶ ಅನ್ವಯವಾಗುವುದೆಂದು ಎನ್.ಜಿ.ಟಿ.ಯ ತೀರ್ಪಿನಲ್ಲಿ ಹೇಳಿರುವುದಿಲ್ಲ. ಆದುದರಿಂದ, ಈಗಾಗಲೇ ನಿಯಮಾನುಸಾರ ಮಂಜೂರಾತಿ ಪಡೆದಿರುವಂತಹ ಪ್ರಕರಣಗಳಲ್ಲಿ ಮಾನ್ಯ ಎನ್.ಜಿ.ಟಿ.ಯ ಆದೇಶದನ್ವಯ, ಕಟ್ಟಡ ನಿರ್ಮಾಣ ಮಾಡದಂತೆ ತಡೆಯುವುದು ಕಾನೂನುಬಾಹಿರವಾಗುತ್ತದೆ.

ತದನಂತರ ಈ ಕೆಳಕಂಡ ಅಂಶಗಳ ಬಗ್ಗೆ ಕಾನೂನು ಇಲಾಖೆಯ ಅಭಿಪ್ರಾಯವನ್ನು ಕೋರಲಾಗಿತ್ತು.

1) ಹಸಿರು ನ್ಯಾಯಮಂಡಳಿಯ ದಿನಾಂಕ:04-05-2016 ರಂದು ನೀಡಿರುವ ಆದೇಶವು mandatory ಅಥವಾ advisory ಎನ್ನುವ ಬಗ್ಗೆ.

2) ಹಸಿರು ನ್ಯಾಯಮಂಡಳಿಯು ನೀಡಿರುವ ತೀರ್ಪನ್ನು ಪ್ರಶ್ನಿಸಿ, ಮೆ॥ ಮಂತ್ರಿ ಟೆಕ್ನೋ ಪ್ರೈವೇಟ್ ಲಿಮಿಟೆಡ್, ಇವರು ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿರುವುದರಿಂದ ಈ ಹಂತದಲ್ಲಿ ಹಸಿರು ನ್ಯಾಯಮಂಡಳಿಯ ಆದೇಶವನ್ನು ಅನುಷ್ಠಾನಗೊಳಿಸಲು ತೀರ್ಮಾನ ಕೈಗೊಳ್ಳಬಹುದೇ?

3) ಹಸಿರು ನ್ಯಾಯಮಂಡಳಿಯು ನೀಡಿರುವ ತೀರ್ಪು ಕೇವಲ ಪ್ರತಿವಾದ ಸಂಸ್ಥೆಗಳಿಗೆ ಸಂಬಂಧಿಸಿದೆಯೇ ಅಥವಾ ಎಲ್ಲರಿಗೂ ಅನ್ವಯವಾಗುತ್ತದೆಯೇ.

4) ದಿನಾಂಕ:17–05–2016ರ ಅರೆ ಸರ್ಕಾರಿ ಪತ್ರದಲ್ಲಿ ಸರ್ಕಾರದಿಂದ ನೀಡಿರುವ ನಿರ್ದೇಶನವು ಕಾನೂನು ಸಮ್ಮತವಾಗಿದೆಯೇ.

5) ಸಂಬಂಧಿಸಿದ ಕಾಯ್ದೆ ಅಥವಾ ನಿಯಮಗಳಿಗೆ ತಿದ್ದುಪಡಿ ಬಾಕಿಯಿರಿಸಿ, ಮಾನ್ಯ ಹಸಿರು ನ್ಯಾಯಮಂಡಳಿಯು ನೀಡಿರುವ ಆದೇಶವನ್ನು ಅನುಷ್ಠಾನಗೊಳಿಸಬಹುದೇ? ಅಲ್ಲಿಯವರೆಗೆ ಹಾಲಿ ಚಾಲ್ತಿಯಲ್ಲಿರುವ ನಿಯಮಾವಳಿಗಳನ್ವಯ ಕ್ರಮ ವಹಿಸಬಹುದೇ ಅಥವಾ ಸರ್ಕಾರ ದಿನಾಂಕ:17–05–2016ರ ಪತ್ರದಲ್ಲಿ ನೀಡಿರುವ ನಿರ್ದೇಶನದಂತೆ ಕ್ರಮ ವಹಿಸಲು ಮನರುಚ್ಚರಿಸಬಹುದೇ.

ಮೇಲ್ಕಂಡ ಅಂಶಗಳ ಬಗ್ಗೆ ಕಾನೂನು ಇಲಾಖೆಯು ಈ ಕೆಳಕಂಡಂತೆ ಅಭಿಪ್ರಾಯವನ್ನು ನೀಡಿರುತ್ತದೆ.

1) ಹಸಿರು ನ್ಯಾಯಮಂಡಳಿಯು ದಿನಾಂಕ:04–05–2016 ರಂದು ನೀಡಿರುವ ಆದೇಶವು ಸಲಹಾತ್ಮಕವಾದ ಆದೇಶವಲ್ಲ. ಮಾನ್ಯ ನ್ಯಾಯಮಂಡಳಿಯು "General conditions or directions" ಎಂದು ತನ್ನ ತೀರ್ಪಿನಲ್ಲಿ ಉಚ್ಚರಿಸಿರುವುದರಿಂದ ಮಾನ್ಯ ನ್ಯಾಯಮಂಡಳಿಯ ಆದೇಶವು mandatory ಎಂದು ಪರಿಗಣಿಸಬೇಕಾಗುತ್ತದೆ.

2) ಮಾನ್ಯ ಹಸಿರು ನ್ಯಾಯಾಧಿಕರಣವು ದಿನಾಂಕ:04–05–2016 ರಂದು ನೀಡಿರುವ ತೀರ್ಪನ್ನು ಮೆ॥ ಮಂತ್ರಿ ಟೆಕ್ನೋ ಪ್ರೈವೇಟ್ ಲಿಮಿಟೆಡ್ ಇವರು ಸರ್ವೋಚ್ಛ ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿ ಪ್ರಶ್ನಿಸಿದ್ದರೂ, ಮಾನ್ಯ ಸರ್ವೋಚ್ಛ ನ್ಯಾಯಾಲಯವು ಸದರಿ ಪ್ರಕರಣದಲ್ಲಿ, ಮಾನ್ಯ ಹಸಿರು ನ್ಯಾಯಮಂಡಳಿಯು ಮೇಲ್ಮನವಿದಾರರು ರೂ.117.35 ಕೋಟಿ ದಂಡ ಪಾವತಿಸುವಂತೆ ನೀಡಿದ ಆದೇಶಕ್ಕೆ ಮಾತ್ರ ಅಂಶಿಕವಾಗಿ ತಡೆಯಾಜ್ಞೆ ನೀಡಿರುವುದರಿಂದ, ಮಾನ್ಯ ನ್ಯಾಯಮಂಡಳಿಯ ತೀರ್ಪಿನ ಇನ್ನುಳಿದ ಅಂಶಗಳು ಅಬಾಧಿತವಾಗಿ ಉಳಿದಿರುತ್ತವೆ ಮತ್ತು ಉಳಿದ ಆದೇಶವನ್ನು ಅನುಷ್ಠಾನಗೊಳಿಸಲು ಯಾವುದೇ ಬಾಧಕವಿರುವುದಿಲ್ಲ.

3) ಮಾನ್ಯ ಹಸಿರು ನ್ಯಾಯಮಂಡಳಿಯ ತೀರ್ಪಿನಲ್ಲಿ "General conditions ಮತ್ತು specific conditions/directions for respondent 9 ಎಂದು ಪ್ರತ್ಯೇಕವಾಗಿ ನಿರ್ದೇಶನಗಳನ್ನು ನೀಡಿರುವುದರಿಂದ, specific conditions/directions for respondent 9 ಎಂಬ ಶೀರ್ಷಿಕೆಯಡಿಯ ನಿರ್ದೇಶನಗಳು ಪ್ರಕರಣದ 9ನೇ ಪ್ರತಿವಾದಿ ಸಂಸ್ಥೆಗೆ ಅನ್ವಯವಾಗುತ್ತದೆ ಮತ್ತು "General conditions ಎಂಬ ಶೀರ್ಷಿಕೆಯಡಿ ನೀಡಿರುವ ನಿರ್ದೇಶನಗಳು ಸಾರ್ವತ್ರಿಕವಾಗಿ ಎಲ್ಲರಿಗೂ ಅನ್ವಯವಾಗುತ್ತದೆ.

4) ಮಾನ್ಯ ನ್ಯಾಯಮಂಡಳಿಯ ತೀರ್ಪಿನಲ್ಲಿ ನಿರ್ದೇಶನಗಳನ್ನು ಜಾರಿಗೊಳಿಸಲು ದಿನಾಂಕವನ್ನು ನಿಗದಿಗೊಳಿಸದೇ ಇರುವುದರಿಂದ, ತೀರ್ಪಿನ ನಂತರ ಈ ಎಲ್ಲಾ ನಿರ್ದೇಶನಗಳು ಜಾರಿಗೆ ಬಂದಂತಾಗುತ್ತದೆ. ಆದರೂ ಈ ಅಂಶಗಳನ್ನು ಆಡಳಿತ ಇಲಾಖೆ [illegible] ನ್ಯಾಯಮಂಡಳಿಯ ಮುಂದೆ ಪ್ರಸ್ತಾಪಿಸಿ, ಮಾನ್ಯ ನ್ಯಾಯಮಂಡಳಿಯ ತೀರ್ಪನ್ನು ತಕ್ಷಣದಿಂದ ಜಾರಿಗೊಳಿಸಲು ಇರುವ ಅಡೆತಡೆಗಳ ಬಗ್ಗೆ ಮನವರಿಕೆ ಮಾಡಿಕೊಟ್ಟು, ನಿಯಮಗಳಿಗೆ ತಿದ್ದುಪಡಿ ಮಾಡಲು ಕಾಲಾವಕಾಶ ನೀಡುವಂತೆ ನ್ಯಾಯಮಂಡಳಿಯನ್ನು ಕೋರಬಹುದಾಗಿರುತ್ತದೆ.

ಮೇಲ್ಕಂಡ ಕಾನೂನು ಇಲಾಖೆಯ ಅಭಿಪ್ರಾಯದಂತೆ ಇಂತಹ ಪ್ರಕರಣಗಳಲ್ಲಿ ಅಗತ್ಯ ಕ್ರಮ ಕೈಗೊಳ್ಳುವಂತೆ ತಮಗೆ ತಿಳಿಸಲು ನಿರ್ದೇಶಿತನಾಗಿದ್ದೇನೆ.

ತಮ್ಮ ನಂಬುಗೆಯ,

(ಎನ್. ನರಸಿಂಹಮೂರ್ತಿ)
ಸರ್ಕಾರದ ಅಧೀನ ಕಾರ್ಯದರ್ಶಿ,
ನಗರಾಭಿವೃದ್ಧಿ ಇಲಾಖೆ.